ದೂರವಾಣಿ ಸಂಖ್ಯೆ: 2419310/2419224

Email:gardendepartment.uom@gmail.com
www.uni.mysore.ac.in

ಮೈಸೂರು ವಿಶ್ವವಿದ್ಯಾನಿಲಯ
Estd:1916

(Re-accredited by NACC with 3.47 CGPA of 4.0 Scale)
(NIRF -2020 Ranked 27 in University Category & 47 in Overall Category)

ತೋಟಗಾರಿಕಾ ವಿಭಾಗ
ಮಾನಸಗಂಗೋತ್ರಿ,
ಮೈಸೂರು–570006

ಸಂ.ಯುಜಿಡಿ/ 416 /2021–22 ದಿನಾಂಕ:01.02.2022

## ಪ್ರಕಟಣೆ

**ವಿಷಯ:– 2021–22ನೇ ಸಾಲಿನ ವಿಭಾಗದ ಹುಣಸೆ ಮತ್ತು ಮಾವು ಫಸಲಗಳನ್ನು ಟೆಂಡರ್ ಕಂ. ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ**

–:–

ಸಮಸ್ತ ಜನಗಳಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗದ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ **ಹುಣಸೆ ಮತ್ತು ಮಾವು ಫಸಲಿನ 2021–22ನೇ ಸಾಲಿನ ಟೆಂಡರ್ ಕಂ. ಬಹಿರಂಗ ಹರಾಜು** ಪ್ರಕ್ರಿಯೆ ದಿನಾಂಕ ***09.02.2022ರ*** ಬೆಳಗ್ಗೆ 11.00 ಗಂಟೆಗೆ ಮಾನಸಗಂಗೋತ್ರಿಯಲ್ಲಿರುವ ನರ್ಸರಿ ತೋಟದಲ್ಲಿ ಪ್ರಾರಂಭವಾಗುತ್ತದೆ. ಸದರಿ ಟೆಂಡರ್ ಕಂ. ಬಹಿರಂಗ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಚಿಸುವವರು ಮುಂಗಡ ಹಣ ರೂ.**6,000/–**[ಆರು ಸಾವಿರ ರೂಪಾಯಿ]ಗಳ ನಗದನ್ನು ಠೇವಣಿಯನ್ನಾಗಿ ಹರಾಜು ಸ್ಥಳದಲ್ಲಿ ಪಾವತಿಸಿದ ನಂತರವೇ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಬಿಡ್ ಮಾಡಬಹುದು. ಟೆಂಡರ್ ಸಲ್ಲಿಸುವವರು ಮುಚ್ಚಿದ ಲಕೋಟೆಯೊಂದಿಗೆ ದಿನಾಂಕ **08.02.2022ರ ಸಂಜೆ 5–00ಗಂಟೆಯೊಳಗಾಗಿ** ಕಛೇರಿಗೆ ಸಲ್ಲಿಸತಕ್ಕದು. ಟೆಂಡರ್ ಕಂ. ಬಹಿರಂಗ ಹರಾಜಿನ ಯಶಸ್ವಿ ಬಿಡ್‌ದಾರರು ಪೂರ್ತಾ ಹಣವನ್ನು ಸ್ಥಳದಲ್ಲೇ ಪಾವತಿಸತಕ್ಕದ್ದು.

1. ಹುಣಸೆ ಫಸಲಿನ ಮರ 177
2. ಮಾವು ಫಸಲಿನ ಮರ 50

ಈ ಬಗ್ಗೆ ಹೆಚ್ಚಿನ ವಿವರಗಳಿಗೆ : ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0821–2419310

ಸಹಾಯಕ ನಿರ್ದೇಶಕರು

ಸಹಾಯಕ ನಿರ್ದೇಶಕರು
ತೋಟಗಾರಿಕೆ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 006

ದೂರವಾಣಿ ಸಂಖ್ಯೆ: 2419310/2419224

Email:gardendepartment.uom@gamil.com
www.uni.mysore.ac.in

ಮೈಸೂರು ವಿಶ್ವವಿದ್ಯಾನಿಲಯ
Estd:1916

(Re-accredited by NACC at "A" Grade with a CGPA of 3.47)
(Ranked 57th and 36th among Universities in NIRF ranking 2017)

ತೋಟಗಾರಿಕಾ ವಿಭಾಗ
ಮಾನಸಗಂಗೋತ್ರಿ,
ಮೈಸೂರು-570006

ದಿನಾಂಕ:01.02.2022

## 2021-22ನೇ ಸಾಲಿನ ಹುಣಸೆ ಮತ್ತು ಮಾವು ಫಸಲಿನ ಟೆಂಡರ್ ಕಂ. ಬಹಿರಂಗ ಹರಾಜಿನ 'ಷರತ್ತುಗಳು'

1. **ಹುಣಸೆ ಮತ್ತು ಮಾವು** ಫಸಲಿನ ಬಹಿರಂಗ ಹರಾಜು ಜರುಗುವ ಮುಂಚಿತವಾಗಿ ಬಿಡ್‌ದಾರರು ರೂ.6000/-[ಆರು ಸಾವಿರ ರೂಪಾಯಿ] ಇ.ಎಂ.ಡಿ. ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು.
2. ಇ.ಎಂ.ಡಿ. ಮೊತ್ತವನ್ನು ಸೆಕ್ಯೂರಿಟಿ ಬಿಡ್ ಎಂದು ಪರಿಗಣಿಸಿ ಸದರಿ ಮೊತ್ತವನ್ನು ಫಸಲಿನ ಹಕ್ಕಿನ ಅವಧಿಯು ಅಂತ್ಯವಾದ ನಂತರ ಹಿಂದಿರುಗಿಸಲಾಗುವುದು.
3. ಹರಾಜಿನಲ್ಲಿ ಅಂತಿಮ ಬಿಡ್ ಮಾಡಿದವರು ಸ್ಥಳದಲ್ಲೇ ಪೂರ್ತಾ ಹಣವನ್ನು ಸಂದಾಯ ಮಾಡತಕ್ಕದ್ದು.
4. ಸದರಿ ಹರಾಜಿಗೆ ಸಂಬಂಧಪಟ್ಟ ಮರಗಳ ಫಸಲನ್ನು ಕೀಳುವಾಗ ಯಾವುದೇ ಮರಗಳಿಗಾಗಲೀ ಅಥವಾ ವಿಶ್ವವಿದ್ಯಾನಿಲಯದ ಇನ್ನಾವುದೇ ಆಸ್ತಿಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು.
5. ಟೆಂಡರ್ ಸಲ್ಲಿಸುವವರು ರೂ.6,000/-ಗಳಿಗೆ ಡಿ.ಡಿ.ಯನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹೆಸರಿನಲ್ಲಿ ಪಡೆದು ಮುಚ್ಚಿದ ಲಕೋಟೆಯೊಂದಿಗೆ ದಿನಾಂಕ **08.02.2022ರ ಸಂಜೆ 5-00ಗಂಟೆಯೊಳಗಾಗಿ** ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕೆ ವಿಭಾಗ, ಮಾನಸಗಂಗೋತ್ರಿ, ಮೈಸೂರು-570 006 ಇವರಿಗೆ ಸಲ್ಲಿಸತಕ್ಕದು.
6. ಟೆಂಡರ್ ಕಂ. ಬಹಿರಂಗ ಹರಾಜಿನ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ನಿರ್ಧಾರವೇ ಅಂತಿಮವಾಗಿರುತ್ತದೆ.
7. ಹರಾಜಿನಲ್ಲಿ ಫಸಲುಗಳನ್ನು ತೆಗೆದುಕೊಂಡವರು, ಅನುಮತಿ ಪಡೆದ ನಂತರ ಸದರಿ ಬಿಡ್ ಮಾಡಿದ ಫಸಲುಗಳು ಹರಾಜು ಜರುಗಿದ ದಿನಾಂಕದಿಂದ ಪ್ರಸ್ತುಕ ಫಸಲಿಗೆ ಮಾತ್ರ ಒಳಪಟ್ಟಿರುತ್ತದೆ.
8. ಯಶಸ್ವಿ ಬಿಡ್‌ದಾರರು ಪ್ಯಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಪ್ರತಿಯನ್ನು ನೀಡತಕ್ಕದ್ದು.
9. ಯಶಸ್ವಿ ಬಿಡ್‌ದಾರರು ಮಾರಾಟ ತೆರಿಗೆಯನ್ನು ಪಾವತಿಸಬೇಕಿರುತ್ತದೆ.
10. ಈ ಬಗ್ಗೆ ಹೆಚ್ಚಿನ ವಿವರಗಳಿಗೆ : ಸಹಾಯಕ ನಿರ್ದೇಶಕರು, ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ದೂರವಾಣಿ ಸಂಖ್ಯೆ: 0821-2419310

-=-0-=-

ಸಹಾಯಕ ನಿರ್ದೇಶಕರು
ತೋಟಗಾರಿಕೆ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 006